ಬಾದಾಮಿ ತಾಲ್ಲೂಕಿನಲ್ಲಿ ಬಸ್ ಸೌಕರ್ಯ ಒದಗಿಸುವುದು

(೯೭೪) ಶ್ರೀ ಬಿ.ಬಿ. ಚಿಮ್ಮನಕಟ್ಟಿ (ಬಾದಾಮಿ).—ಮಾನ್ಯ ಸಾರಿಗೆ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಬಾದಾಮಿ ತಾಲ್ಲೂಕಿನ ಸಾರಿಗೆ ಸಂಸ್ಥೆ ಡಿಪೋವಿನಲ್ಲಿ ಪ್ರತಿ ವರ್ಷ ಆಗಿರುವ ಖರ್ಚು ಎಷ್ಟು ಮತ್ತು ಬಂದಿರುವ ಲಾಭವೆಷ್ಟು ? (೧೯೮೧ ರಿಂದ ೧೯೮೪ ಜನವರಿವರೆಗೆ)

ಆ) ಪ್ರತಿ ವರ್ಷ ಎಷ್ಟು ಹೊಸ ಬಸ್ಸುಗಳನ್ನು ಕೊಡಲಾಗಿದೆ ೧೯೮೧ ರಿಂದ ೧೯೮೪)

ಇ) ಹೀಗಿದ್ದಾಗ್ಯೂ ಅನೇಕ ಹಳ್ಳಿಯ ಜನರು ಬಸ್ಸಿನ ಸೌಕರ್ಯ ಪಡೆಯದಿರುವುದು ಸರಕಾರದವರ ಗಮನಕ್ಕೆ ಬಂದಿದೆಯೆಂ?

ಈ) ಹಾಗಿದ್ದಲ್ಲಿ ಸರಕಾರದವರು ಈ ಬಗ್ಗೆ ಕೈ ಕೊಳ್ಳುವ ಕ್ರಮವೇನು?

ಶ್ರೀ ಎಂ.ಪಿ. ಪ್ರಕಾಶ್ (ಸಾರಿಗೆ ರಾಜ್ಯ ಮಂತ್ರಿಗಳು).—

ಅ)

ವರ್ಷ	ಖರ್ಚು	ಲಾಭ:ನಷ್ಟ
	(ಲಕ್ಷ ರೂ.ಗಳಲ್ಲಿ)	
೧೯೮೧–೮೨	೧೨೯.೮೦	– ೧೦.೩೩
೧೯೮೨–೮೩	೧೪೨.೯೨	– ೩.೯೩
೧೯೮೩–೮೪	೧೧೭.೦೧	+ ೧.೬೧
(ಡಿಸೆಂಬರ್ ೮೩ರವರೆಗೆ)		

ಆ)

ವರ್ಷ	ಒದಗಿಸಿರುವ ಹೊಸ ಬಸ್ಸುಗಳ ಸಂಖ್ಯೆ
೧೯೮೧–೮೨	೮
೧೯೮೨–೮೩	೨
೧೯೮೩–೮೪	೩
(ಡಿಸೆಂಬರ್ ೮೩ರವರೆಗೆ)	

ಇ) ಬಂದಿದೆ.

ಈ) ಮೋಟಾರು ವಾಹನಗಳು ಓಡಾಡುವುದಕ್ಕೆ ಆಗುವಂತಹ ರಸ್ತೆಗಳಿಲ್ಲದ ಕೆಲವು ಹಳ್ಳಿಗಳಿಗೆ ಬಸ್ ಸಂಚಾರವನ್ನು ಒದಗಿಸಲು ಸಾಧ್ಯವಾಗಿಲ್ಲ. ಮೋಟಾರು ವಾಹನಗಳು ಓಡಾಡುವಂತೆ ರಸ್ತೆಗಳು ಆದ ಮೇಲೆ ಈ ಹಳ್ಳಿಗಳಿಗೆ ವಾಹನ ಸೌಕರ್ಯವನ್ನು ಒದಗಿಸಲಾಗುವುದು.

ಶ್ರೀ ಎನ್. ಚಿಕ್ಕೇಗೌಡ.—ಮಾನ್ಯ ಅಧ್ಯಕ್ಷರೇ ನಾನು ಒಂದು ಪ್ರಶ್ನೆ ಕೇಳಿದ್ದೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಚಿಕ್ಕೇಗೌಡರು ಕೇಳಿದ ಪ್ರಶ್ನೆಗೆ ನಮಗೆ ಸಂಬಂಧ ಕೇಳಿದ್ದೇನೆ. ಉತ್ತರ ಇನ್ನೂ ಬಂದಿಲ್ಲ. ಅವರು ಹೋದ ಅಧಿವೇಶನದಲ್ಲೇ ಈ ಪ್ರಶ್ನೆಯನ್ನು ಕೇಳಿದರು. ಮುಂದಿನ ವಾರದೊಳಗೆ ಎಲ್ಲಾ ಮಾಹಿತಿಗಳನ್ನು ತರಿಸಿ ಕಳಿಸಿಕೊಡುತ್ತೇನೆ.

ಶ್ರೀ ಎಚ್. ಚಿಕ್ಕೇ ಗೌಡ.—ಈ ಪ್ರಶ್ನೆಯನ್ನ ಕಳೆದ ಅಧಿವೇಶನದಲ್ಲಿ ಲ್ಯಾಪ್ಸ್ ಆಯಿತು. ಇದಕ್ಕೆ ಏನಾದರೂ ಒಂದು ಇಂಥಾದ್ದೇ ದಿವಸ ಎಂದು ನಿಗದಿ ಮಾಡಿ Held over question our ಎಂದು ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ—ಮುಂದಿನ ವಾರ ತರಿಸಿ ಕೊಡುತ್ತೇನೆ.